**ದಿನಾಂಕಃ 27-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು**

**ಮುಂದುವರೆದ ಪಾಟೀ ಸವಾಲು 4 ನೇ ಪ್ರತಿವಾದಿ ಪರ ಶ್ರೀಮತಿ. ಎಸ್.ಆರ್.ಜಿ. ವಕೀಲರಿಂದಃ**

8. 1 ನೇ ಪ್ರತಿವಾದಿಯು 4 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಖರೀದಿ ಹಾಕಿಕೊಟ್ಟಿರುತ್ತಾರೆ ಎಂದು ನಮೂದಿಸಿರುತ್ತೇನೆ ಎಂದರೆ ಸರಿ. ದ್ಯಾಮವ್ವ ತೀರಿಕೊಂಡ ನಂತರ ಯಲ್ಲವ್ವ ದ್ಯಾಮವ್ವನ ಹೆಸರಿನಲ್ಲಿ ಖರೀದಿ ಹಾಕಿಕೊಟ್ಟಿರುತ್ತಾರೆ ಎಂದು ಯಲ್ಲವ್ವ ಮತ್ತು ಸಾಕ್ಷಿದಾರರ ವಿರುದ್ಧ ಯಾವುದೇ ದೂರನ್ನು ಸಲ್ಲಿಸಿರುವುದಿಲ್ಲ. ನಾನು 2 ಮತ್ತು 3 ನೇ ಪ್ರತಿವಾದಿಯರು ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಖರೀದಿ ಪತ್ರಕ್ಕೆ 2 ನೇ ಪ್ರತಿವಾದಿಯು ಒಪ್ಪಿಗೆ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿ.

9. 2 ನೇ ಪ್ರತಿವಾದಿಯು ದ್ಯಾಮವ್ವನ ಮಗನಾಗಿರುತ್ತಾನೆ ಎಂದರೆ ಸರಿ. ನನ್ನ ಗಂಡ ಯಮನಪ್ಪ ಸನ್ 2002 ರಲ್ಲಿ ತೀರಿಕೊಂಡಿರುತ್ತಾರೆ. ದಾವಾ ಆಸ್ತಿಯನ್ನು ಸನ್ 2011 ರಲ್ಲಿ ಮಾರಾಟ ಮಾಡಿರುತ್ತಾರೆ. ಸನ್ 2011 ರಲ್ಲಿ ನನ್ನ ಅತ್ತೆ ಮನೆಯಲ್ಲಿ ಕಲಗುರ್ಕಿಯಲ್ಲಿ ವಾಸವಾಗಿದ್ದೇನು. ದಾವಾ ಆಸ್ತಿ ನಂ.55/3 ಕ್ಷೇತ್ರ 3 ಎಕರೆ 35 ಗುಂಟೆ ಇರುತ್ತದೆ. ಸದರಿ ಆಸ್ತಿಯು ಪೂಟ ಹಿಸ್ಸಾ ಆಗಿರುವುದಿಲ್ಲ. ಪಹಣಿ ಪತ್ರಿಕೆಯಲ್ಲಿ ದ್ಯಾಮವ್ವನ ಜೊತೆ ನಿಜಪ್ಪ ತಾ.ನಿಜವ್ವ ಮಾದರ ರವರ ಹೆಸರಿನಲ್ಲಿ ಇತ್ತು. ಸದರಿ ಆಸ್ತಿ ವಿಭಾಗವಾದ ಬಗ್ಗೆ ಯಾವುದೇ ದಾಖಲಾತಿ ಇರುವುದಿಲ್ಲ. ದಾವೆಯಲ್ಲಿ ನಿಜಪ್ಪ ತಾ.ನಿಜವ್ವ ಮಾದರ ಇವರ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಸದರಿಯವರು ಜೀವಂತವಾಗಿರುತ್ತಾರೆ. ದಾವಾ ಆಸ್ತಿಯ ಚಕಬಂದಿ ಹೇಳಲು ಬರುವುದಿಲ್ಲ.

10. O.S.No. 294/2024 ನಿಜಪ್ಪ ತಾ.ನಿಜವ್ವ ಮಾದರ ರವರು ಸರ್ವೆ ನಂ.55/3 ಗೆ ಸಂಬಂಧಪಟ್ಟಂತೆ ದಾವೆ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಪಕ್ಷಗಾರಳಾಗಿದ್ದು ದಾವೆಯ ಬಗ್ಗೆ ನನಗೆ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ಸನ್ 2011 ರಲ್ಲಿ ನನ್ನ ಕುಟುಂಬದವರು ದಾವಾ ಆಸ್ತಿಯನ್ನು ಮಾರಾಟಕ್ಕೆ ತಗೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿಯು ಕೋಲ್ಹಾರ ಗ್ರಾಮದವರು ಎಂದರೆ ಸರಿ.

11. ಶಶಿ ಪೂಜಾರಿ ಹಾಗೂ ಹಣಮಂತ ನಡುವಿನಮನಿ ರವರು ಬಂದು ದಾವಾ ಆಸ್ತಿಯನ್ನು ಮಾರಾಟ ಮಾಡುತ್ತಿರುತ್ತಾರೆ ಎಂದು 4 ನೇ ಪ್ರತಿವಾದಿಗೆ ತಿಳಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿಯು ನಮ್ಮ ಮನೆಗೆ ಬಂದು ವಿಚಾರಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು ಉಳಿದ ವಾದಿಯರು ಹಾಗೂ ಉಳಿದ ಪ್ರತಿವಾದಿಯರು ಯಲ್ಲವ್ವನನ್ನೆ ದ್ಯಾಮವ್ವ ಎಂದು ಪರಿಚಯ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಆ ಕಾರಣ ನಮ್ಮ ಸಮಕ್ಷಮ 4 ನೇ ಪ್ರತಿವಾದಿ ಹಾಗೂ 1 ನೇ ಪ್ರತಿವಾದಿ ನಡುವೆ ಮಾತುಕತೆ ಆಗಿರುತ್ತದೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಗೆ 1 ನೇ ಪ್ರತಿವಾದಿಯು ದ್ಯಾಮವ್ವನ ಚುನಾವಣೆ ಗುರುತಿನ ಚೀಟಿಯಲ್ಲಿ 1 ನೇ ಪ್ರತಿವಾದಿಯು ತನ್ನ ಫೋಟೋವನ್ನು ಹಚ್ಚಿ ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮಾತುಕತೆಗೆ ನಾವು ಒಪ್ಪಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. 1 ಎಕರೆ 36 ಗುಂಟೆಗೆ 74,000/- ಗಳಿಗೆ ಮಾತುಕತೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಮಾತುಕತೆ ಆದ ಸಮಯದಲ್ಲಿ ನಾನು ಮತ್ತು ಉಳಿದ ವಾದಿ ಮತ್ತು ಪ್ರತಿವಾದಿಯರು ಹಾಜರಿದ್ದೇವು ಎಂದರೆ ಸರಿಯಲ್ಲ.

12. ದಿಃ 09.02.2011 ರಂದು 1 ರಿಂದ 3 ನೇ ಪ್ರತಿವಾದಿ ಹಾಗೂ ನಾವು ಸಬ್ ರಜಿಸ್ಟ್ರ ಕಛೇರಿಗೆ ಬಂದಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ 1 ನೇ ಪ್ರತಿವಾದಿಯು ಖರೀದಿ ಪತ್ರವನ್ನು ನೋಂದ ಮಾಡಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಕೈಯಲ್ಲಿ 4 ನೇ ಪ್ರತಿವಾದಿಯು ಹಣ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಶಶಿ ಪೂಜಾರಿ ಹಾಗೂ ಹಣಮಂತ ನಡುವಿನಮನಿ ಸಾಕ್ಷಿದಾರರಾಗಿ ಹಾಗೂ ಗುರುತಿಸಿಕೊಂಡವರು ಎಂದು ಸಹಿ ಮಾಡಿರುತ್ತಾರೆ

ಎಂದರೆ ನನಗೆ ಗೊತ್ತಿಲ್ಲ. ಶಶಿ ಪೂಜಾರಿ ಹಾಗೂ ಹಣಮಂತ ನಡುವಿನಮನಿ ರವರು ಕಲಗುರ್ಕಿ ಗ್ರಾಮದವರು ಎಂದರೆ ಸರಿ. ಸದರಿಯವರು ಪರಿಚಯ ಇರುತ್ತದೆ. 4 ನೇ ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ನಾನು ಮತ್ತು ಉಳಿದ ವಾದಿ ಮತ್ತು ಪ್ರತಿವಾದಿಯರು ಸೇರಿ 4 ನೇ ಪ್ರತಿವಾದಿಗೆ ಖರೀದಿ ಪತ್ರ ಬರೆಸಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಆಸ್ತಿಯನ್ನು ಪಡೆದುಕೊಳ್ಳಬೇಕೆಂಬ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ ಅಮಿತ್ ಘಟ್ಟಿ)**
**ದಿವಾಣಿ ನ್ಯಾಯಾಧೀಶರು ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**